BBH -2-

SN – 075

# I ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2013
## (F+R) (2011-12 and Onwards)
## ಕನ್ನಡ ಭಾಷಾ ಪತ್ರಿಕೆ – ೧
## ಸಾಹಿತ್ಯ ಸಲ್ಲಾಪ – ೧

Time : 3 Hours                                                  Max. Marks : 100

ST. CLARET COLLEGE LIBRARY

I. ಈ ಪದ್ಯದ ಭಾವಾರ್ಥವನ್ನು ಬರೆಯಿರಿ : **(1×6=6)**

1) ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸ್ಮರ ಚಾಪಮ ನಿಳಿಕೆಯ್ವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

2) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ಸಿದ್ಧಲಿಂಗಯ್ಯ, ಸತ್ಯಂತಪ, ಈಸಬೇಕು ಇದ್ದು ಜೈಸಬೇಕು.

II. 1) ಇವುಗಳಲ್ಲಿ **ಐದು** ಪದಗಳಿಗೆ ಮೂಲರೂಪ ಬರೆಯಿರಿ : **(5×1=5)**

ಹೋಗು, ಗೆಳತಿ, ಹರಣ, ಜಾತ್ರೆ, ಬಿಜ್ಜೆ, ಬಕುತಿ, ಮ್ಹಾತಾಯಿ.

2) ಇವುಗಳಲ್ಲಿ **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**

ಅಬ್ಬೆ, ದಂತಿಪ, ಕಜ್ಜ, ಪುಳಿಂದ, ಬಾಳ್, ನದಿನಂದನ, ಲಂಬಣ.

3) ಇವುಗಳಲ್ಲಿ **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(5×1=5)**

ನೆಲದಾಧಾರ, ಕಲ್ಯಾಣಾರ್ಥ, ನಾಡೋಜ, ಊರೂರು, ಮಾತನಾಡು, ರಥೋತ್ಸವ, ನಿಟ್ಟುಸಿರು.

4) ಗಜವದನ, ಚಂದ್ರನಂತೆ, ಇದೇ ರೀತಿಯ **ಐದು** ಉಪಮೆ ರೂಪಕಗಳನ್ನು ಬರೆಯಿರಿ : **(5×1=5)**

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(4×5=20)**

1) ಕರ್ಣನಿಗೆ ತನ್ನ ಜನ್ಮ ರಹಸ್ಯ ತಿಳಿದ ಬಗೆಯನ್ನು ಬರೆಯಿರಿ.
2) ತಡವಾಗಿ ಬಂದ ಅಮೃತಮತಿಯನ್ನು ಅಷ್ಟಾವಂಕ ನಡೆಸಿಕೊಂಡ ರೀತಿಯನ್ನು ಕುರಿತು ಬರೆಯಿರಿ.
3) ಪೂರ್ಣಸ್ವಾಮಿ ಅಯ್ಯಂಗಾರರ ವ್ಯಕ್ತಿತ್ವವನ್ನು ಪರಿಚಯಿಸಿ.
4) ಪಾಪಣ್ಣನ ವೈಯಕ್ತಿಕ ಬದುಕಿನ ಚಿತ್ರಣ ನೀಡಿ.

5) ತನ್ನ ವೈಚಾರಿಕತೆಯಿಂದಾಗಿ ರಾಬರ್ಟ್ ಇಂಗರ್‌ಸಾಲ್ ಅನುಭವಿಸಿದ ಸಂಕಷ್ಟಗಳೇನು ? ವಿವರಿಸಿ.

6) ಜ್ಯೋತಿಷಿ ಮತ್ತು ಯಜಮಾನ ಪರಸ್ಪರರನ್ನು ವಂಚಿಸಿದ ರೀತಿಯನ್ನು ಬರೆಯಿರಿ.

IV. ಇವುಗಳಿಗೆ ವಿವರವಾಗಿ ಉತ್ತರ ಬರೆಯಿರಿ : **(4×12=48)**

1) ಕೃಷ್ಣನು ಕರ್ಣವನ್ನು ಬೇಧಿಸಿದ ಬಗೆ ಯಾವ ರೀತಿಯದು ?

**ಅಥವಾ**

ಚೋಮನ ಮಕ್ಕಳ ಹಾಡು ಕವಿತೆಯ ಆಶಯವನ್ನು ಕುರಿತು ಬರೆಯಿರಿ.

2) ‘ಅಸ್ಥಿ ಪಂಜರ’ ಕತೆಯಲ್ಲಿ ಮೂಡಿಬಂದಿರುವ ದುರಂತವನ್ನು ಕುರಿತು ಬರೆಯಿರಿ.

**ಅಥವಾ**

ಜನಪದ ಸಾಹಿತ್ಯ ಸಂಗ್ರಹಣ ಕಾರ್ಯದಲ್ಲಿ ಕ್ಯಾತವಳ್ಳಿ ರಾಮಣ್ಣನವರಿಗಾದ ಅನುಭವಗಳನ್ನು ಸಂಗ್ರಹಿಸಿ.

3) ಲೇಖಕರ ಪ್ರಕಾರ ಗೊಣಗಾಟಕ್ಕೂ ರೇಗಾಟಕ್ಕೂ ಇರುವ ವ್ಯತ್ಯಾಸವೇನು ? ಇವೆರಡರಲ್ಲಿ ಯಾವುದು ಹೆಚ್ಚು ಅಪಾಯಕಾರಿ ವಿವರಿಸಿ.

**ಅಥವಾ**

ತದ್ರೂಪಿ ಸೃಷ್ಟಿಯ ತಂತ್ರಜ್ಞಾನದಿಂದ ಜೀವಸೃಷ್ಟಿಯ ಬಗೆಗೆ ಎದ್ದಿರುವ ನೈತಿಕತೆಯ ಪ್ರಶ್ನೆಗಳು ಯಾವುವು ?

4) ಮುಖವಾಡವು ಪಾತ್ರಗಳ ಹಿಂದಿನ ಘಟನೆಗಳನ್ನು ಹೇಗೆ ಬಯಲು ಮಾಡುತ್ತದೆ ? ವಿವರಿಸಿ.

**ಅಥವಾ**

ಶಿವರುದ್ರು, ಯುವತಿ, ಖಾದರ್–ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

---